

## ಬಾಕ್ಸರ್ ಸೋನಾಕ್ಷಿ

ಮೋಹಕ ಮುಖದ ಸೋನಾಕ್ಷಿ ಸಿನ್ಹಾ ತಮ್ಮ ಇಮೇಜು ಬದಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಮೊನ್ನೆ ಮೊನ್ನೆ ಕೈಗೆ ಗ್ಲೌಸ್‌ಗಳನ್ನು ತೊಟ್ಟು ಪಕ್ಕಾ ಬಾಕ್ಸರ್‌ನ ದಿರಿಸಿನಲ್ಲಿ ಬಾಕ್ಸಿಂಗ್ ಅಂಗಳದಲ್ಲಿ ಕಾಣಿಸಿಕೊಂಡು ಅಚ್ಚರಿ ಮೂಡಿಸಿದ್ದಾರೆ ಸೋನಾಕ್ಷಿ.

ಸೋನಾಕ್ಷಿ ಬಾಕ್ಸರ್ ಆಗುತ್ತಿರುವುದು 'ಹಾಲಿಡೇ' ಚಿತ್ರಕ್ಕಾಗಿ. ಈ ಚಿತ್ರದಲ್ಲಿ ಮತ್ತೆ ಅಕ್ಷಯ್ ಕುಮಾರ್ ಜೊತೆಗೂಡುತ್ತಿರುವ ಸೋನಾಕ್ಷಿ ಕಾಲೇಜು ವಿದ್ಯಾರ್ಥಿನಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಸೋನಾಕ್ಷಿಯ ಪ್ರತಿಭೆ ಬಗ್ಗೆ ಬಿಟೌನಿನಲ್ಲಿ ತೀವ್ರ ಚರ್ಚೆ ನಡೆಯುತ್ತಿರುವಾಗಲೇ ಶತ್ರುಘ್ನ ಸಿನ್ಹಾರ ಮನೆಯಂಗಳದಿಂದ ಹೊರಬಿದ್ದಿರುವ ಸುದ್ದಿ ಚರ್ಚೆಯ ದಿಕ್ಕನ್ನು ಬದಲಿಸಿದೆ. ಮಣಿರತ್ನಂ ನಿರ್ದೇಶಿಸಲು ಹೊರಟಿರುವ ಮಹತ್ವಾಕಾಂಕ್ಷೆಯ ದ್ವಿಭಾಷಾ ಚಿತ್ರದಲ್ಲಿ ಐಶ್ವರ್ಯಾ ರೈ ಬಚ್ಚನ್ ನಟಿಸಲು ಒಪ್ಪಿಕೊಂಡಿರುವ ಸಂಗತಿ ಗೊತ್ತೇ ಇದೆ. ಈ ಚಿತ್ರಕ್ಕೆ ಮೂವರು ನಾಯಕಿಯರು. ಎರಡನೇ ನಾಯಕಿಯಾಗಿ ಈಗಾಗಲೇ ಶ್ರುತಿ ಹಾಸನ್ ಆಯ್ಕೆಯಾಗಿದ್ದಾರೆ. ಮೂರನೇ ನಾಯಕಿಯ ಸ್ಥಾನಕ್ಕೆ ಮಣಿರತ್ನಂಗೆ ಸೂಕ್ತ ಆಯ್ಕೆ ಎನಿಸಿದ್ದು ಸೋನಾಕ್ಷಿ ಸಿನ್ಹಾ. ಆದರೆ ಅದಕ್ಕೆ ಆಕೆ ಒಲ್ಲೆ ಎಂದಿದ್ದಾರಂತೆ.

ಮಣಿರತ್ನಂ ಕಥೆಯೊಂದಿಗೆ ಶತ್ರುಘ್ನರ ಮನೆ ಮೆಟ್ಟಿಲು ತುಳಿದಿದ್ದರು. ಅತಿ ಸವಾಲು ಎನಿಸುವ ಪಾತ್ರವನ್ನು ಸೋನಾಕ್ಷಿಯೂ ಮೆಚ್ಚಿಕೊಂಡಿದ್ದರು. ಆದರೆ ಈಗಾಗಲೇ ಆಗಿರುವ ಕಮಿಟ್‌ಮೆಂಟ್‌ಗಳೊಂದಿಗೆ ಮಣಿರತ್ನಂ ಅವರ ಚಿತ್ರದ ದಿನಾಂಕ ಹೊಂದಾಣಿಕೆ ಆಗುತ್ತಿಲ್ಲ. ಹೀಗಾಗಿ ಅಪರೂಪದ ಪಾತ್ರದಲ್ಲಿ ನಟಿಸುವ ಅವಕಾಶವನ್ನು ಸೋನಾಕ್ಷಿ ಕಳೆದುಕೊಳ್ಳುತ್ತಿದ್ದಾರೆ.

ಸದ್ಯ ಅಜಯ್ ದೇವಗನ್ ಜೊತೆ 'ಆಕ್ಷನ್ ಜಾಕ್ಸನ್' ಮತ್ತು ಅರ್ಜುನ್ ಕಪೂರ್ ನಾಯಕರಾಗಿರುವ 'ತೇವಾರ್'ನಲ್ಲಿ ಬಿಜಿಯಾಗಿದ್ದಾರೆ. 'ಹಾಲಿ ಡೇ: ಎ ಸೋಲ್ಜರ್ ನೆವೆರ್ ಆಫ್ ಡ್ಯೂಟಿ' ಚಿತ್ರ ಜೂನ್ ಆರರಂದು ತೆರೆ ಕಾಣುವ ಸಾಧ್ಯತೆ ಇದೆ. ಮುರುಗದಾಸ್ ನಿರ್ದೇಶಿಸುತ್ತಿರುವ ಈ ಚಿತ್ರ ತಮಿಳಿನ 'ತುಫಾಕಿ'ಯ ರೀಮೇಕ್.



## ಐಶ್-ಅಭಿ ನಡುವೆ ವಿರಸ?

ಬಿಗ್ ಬಿ ಮನೆಯಿಂದ ಹೊಸದೊಂದು ಸುದ್ದಿ ಸ್ಫೋಟಗೊಂಡಿದೆ. ಐಶ್ವರ್ಯಾ ರೈ ಮತ್ತು ಅತ್ತೆ ಜಯಾ ಬಚ್ಚನ್ ನಡುವೆ ಎಲ್ಲವೂ ಸರಿಯಿಲ್ಲ ಎನ್ನುವುದು ಹಳೇ ಸುದ್ದಿ. ಈಗ ಈ ವಿಷಯಕ್ಕೆ ಸಂಬಂಧಿಸಿ ಅಭಿ ಮತ್ತು ಐಶ್ ನಡುವೆಯೂ ಅಸಮಾಧಾನ ಭುಗಿಲೆದ್ದಿದೆಯಂತೆ!

ಇತ್ತೀಚೆಗೆ ನಡೆದ ಕೋಕಿಲಾಬೆನ್ ಅಂಬಾನಿಯವರ ಬರ್ತ್‌ಡೇ ಪಾರ್ಟಿಯಲ್ಲಿ ಜಯಾ ಒಂದು ಕಡೆ ಓಡಾಡುತ್ತಿದ್ದರೆ ಗಂಡನಿಗೆ ಅಂಟಿಕೊಂಡಿದ್ದ ಐಶ್ವರ್ಯಾ ಅಪ್ಪಿತಪ್ಪಿಯೂ ಅತ್ತೆ ಜೊತೆ ಕಾಣಿಸಿಕೊಳ್ಳಲಿಲ್ಲವಂತೆ. ಇತ್ತೀಚೆಗೆ ನಡೆದ ಅಹಾನಾ ದೇವಲ್‌ರ ವಿವಾಹ ಆರತಕ್ಷತೆಯಲ್ಲಿಯೂ ಐಶ್ ಅತ್ತೆ ಜಯಾ ಬಚ್ಚನ್‌ರಿಂದ ಅಂತರ ಕಾಯ್ದುಕೊಂಡಿದ್ದರು. ಅಂಬಾನಿ ಜನ್ಮದಿನದ ಸಮಾರಂಭದಲ್ಲಂತೂ ಜಯಾ ಮತ್ತು ಐಶ್ವರ್ಯಾ ಕೊನೆವರೆಗೂ ಮುಖಾಮುಖಿಯಾಗಲೇ ಇಲ್ಲ. ಐಶ್ವರ್ಯಾರ ವೃತ್ತಿ ಬದುಕಿನಲ್ಲಿ ಮೂಗು ತೂರಿಸದೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅಭಿಷೇಕ್ ತನ್ನ ಪಾಡಿಗೆ ತಾನಿದ್ದರೆ, ಜಯಾ ಅತ್ತೆಯ ಅಧಿಕಾರ ಚಲಾಯಿಸುತ್ತಿದ್ದಾರೆ. ಮಾವ ಅಮಿತಾಬ್ ಜೊತೆ ಯಾವ ತಕರಾರು ಇಲ್ಲದಿದ್ದರೂ ಅತ್ತೆಯ ಕಿರಿಕಿರಿ ತಡೆಯಲು ಆಗುತ್ತಿಲ್ಲ ಎಂದು ಐಶು ಬೇಸರಗೊಂಡಿದ್ದಾರಂತೆ. ಈ ಕಾರಣಕ್ಕಾಗಿಯೇ ಐಶ್ವರ್ಯಾ ಗಂಡ ಮತ್ತು ಮಗಳೊಂದಿಗೆ ಬೇರೆ ಮನೆ ಮಾಡಲು ಹೊರಟಿದ್ದಾರಂತೆ.

ಆದರೆ ಅತ್ತ ಅಮ್ಮನನ್ನು ಇತ್ತ ಪತ್ನಿಯನ್ನೂ ಬಿಟ್ಟುಕೊಡಲಾಗದೆ ಅಭಿ ಒದ್ದಾಡುತ್ತಿದ್ದಾರೆ. ಆದರೂ ಅಮ್ಮನ ಕುರಿತು ಅಸಹನೆ ತೋರಿಸುತ್ತಿರುವ ಪತ್ನಿಯ ನಡತೆ ಬಗ್ಗೆ ಅಭಿ ಮುನಿಸಿಕೊಂಡಿದ್ದಾರಂತೆ.

■ ಅಮಿ